**Deposition Sheets (RP.No.57) Form No.4**

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 500/2023**

ಪಿ.ಡಬ್ಲ್ಯು ಃ 2 ಸಿ.ಡಬ್ಲ್ಯು ಃ 2

ಸಾಕ್ಷಿದಾರನ ಹೆಸರು ಃ ಜಗದೀಶ್
ತಂದೆಯ ಹೆಸರು ಃ ಅಣ್ಣಯ್ಯ ಪೂಜಾರಿ
ಪ್ರಾಯ ಃ 53 ವರ್ಷ
ಉದ್ಯೋಗ ಃ ಖಾಸಗಿ
ವಾಸ ಃ ಕಲ್ಯಾ

ದಿನಾಂಕ 20.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1ನೇ ಆರೋಪಿಯು ಗೈರು ಹಾಜರಾಗಿದ್ದುಆತನನ್ನು ಗುರುಸಲು ಯಾವುದೇ ತಕರಾರ ಇಲ್ಲ ಎಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ. ಚಾಸಾ-1 ನನ್ನ ಹೆಂಡತಿ. ಚಾಸಾ-3 ರಿಂದ 7 ರವರು ನಮ್ಮ ನೆರೆಕರೆಯವರು.

ದಿಃ03.12.2022 ರಂದು ನಾನು ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದಾರ ಸುಮಾರು ರಾತ್ರಿ 10.00 ಗಂಟೆಗೆ ಚಾಸಾ-1 ರವರು ನನಗೆ ಕರೆ ಮಾಡಿ ನಮ್ಮ ಮನೆಯಲ್ಲಿ ಚಿನ್ನ ಕಳುವಾಗಿದೆ ಎಂದು ತಿಳಿಸಿದರು. ಕೂಡಲೇ ನಾನು ಪೊಲೀಸ್ ಠಾಣೆಗೆ ಹೋಗಿ ಪೊಲೀಸರನ್ನು ಕರೆದುಕೊಂಡುಹೋಗಿರುತ್ತೇನೆ. ಸದರಿ ಸಮಯದಲ್ಲಿ 4 ರಿಂದ 5 ಜನ ಪೊಲೀಸರು ಬಂದಿದ್ದರು. ನನ್ನ ಹೆಂಡತಿ ಮತ್ತು ತಾಯಿಯ ಕರಿಮಣಿ, ಹವಳದ ಚಿನ್ನದ ಸರ ಮತ್ತು ಲಾಕೆಟ್ ಇರುವಂತಹ ಚಿನ್ನದ ಸರ ಮತ್ತು 3 ಬಳೆ, 2 ಜೊತೆ ಕಿವಿ ಒಲೆ , ನನ್ನ ಒಂದು ಚಿನ್ನದ ಸರ, ನನ್ನ ಮಗನ ಒಂದು ಚಿನ್ನದ ಸರ, ನನ್ನ ಬೆಳ್ಳಿಯ ಉಡಿದಾರ-1, ಒಟ್ಟು 13

ವಸ್ತುಗಳು ಕಳುವಾಗಿರುತ್ತವೆ. ಮರುದಿನ ಚಾಸಾ-1 ರವರು ಪೊಲೀಸರಿಗೆ ದೂರನ್ನು ನೀಡಿರುತ್ತಾರೆ. ಮರುದಿನ ಪೊಲೀಸರು ನನ್ನನ್ನು ಕರೆದು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರ ದಿಃ21.12.2022 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-1 ರವರನ್ನು ಠಾಣೆಗೆ ಕರೆದು ಕಳುವಾದ ಚಿನ್ನವನ್ನು ತೋರಿಸಿ ನಿಮ್ಮದೆ ಎಂದು ಕೇಳಿರುತ್ತಾರೆ ಹಾಗೂ ಆರೋಪಿತರ ಭಾವಚಿತ್ರವನ್ನು ತೋರಿಸಿ ಇವರ ಪರಿಚಯ ಇದೆಯಾ ಎಂದು ಕೇಳಿರುತ್ತಾರೆ. ನಮಗೆ 1ನೇ ಆರೋಪಿಯ ಪರಿಚಯ ಇರಲಿಲ್ಲ. ನಂತರ ನಾವು ನ್ಯಾಯಾಲಯದ ಮುಖೇನ ಸದರಿ ಚಿನ್ನವನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಸಾಕ್ಷಿಯು ಕಳುವಾದ ಚಿನ್ನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ರಿಂದ 20 ಎಂದು ಗುರುತಿಸಲಾಗಿದೆ. ಸದರಿ ಚಿನ್ನಗಳನ್ನು ನಮ್ಮ ಮನೆಯಲ್ಲಿ ಒಂದು ಸ್ಟಿಲ್ ಡಬ್ಬದಲ್ಲಿ ಹಾಗೂ ಪಿಂಕ್ ಕಲರ್ ನ ಪರ್ಸ್ ನಲ್ಲಿ ಇಟ್ಟಿದ್ದೇವು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ಟೀಲ್ ಡಬ್ಬ ಹಾಗೂ ಒಂದು ಪರ್ಸ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮುರಿದ ಒಂದು ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-3 ಎಂದು ಗುರುತಿಸಲಾಗಿದೆ. ಪೊಲೀಸರು ಈ ಬಗ್ಗೆ ನಮ್ಮನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ